ಶ್ರೀ ವಿ. ಮಾಸಿಯಪ್ಪ.—ಸ್ವಾಮಿ ಆರ್.ಟಿ.ಎ.ಗೆ ಸಂಬಂಧಪಟ್ಟಹಾಗೆ ಟ್ಯಾಕ್ಸ್ ಅರಿಯರ್ಸ್, ಟಿ.ಪಿ.ಜಿ. ಟ್ಯಾಕ್ಸ್ ಎರಾ್ಲ ಸೇರಿ ಸುಮಾರು 4 ಕೋಟಿ ರೂಪಾಯಿಗಳ ಟ್ಯಾಕ್ಸ್ ವಸೂಲಾಗ ಬೇಕಾಗಿದೆ ಎಂದು ರೆಕಾರ್ಡಿನಿಂದ ಕಂಡುಬರುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ತೀವ್ರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟು ಜಾಗ್ರತೆಯಾಗಿ ಪ್ರಪೋಜಲ್ಸ್ ತರಿಸಿಕೊಂಡು ಸಿಬ್ಬಂದಿಯನ್ನು ಹೆಚ್ಚು ಮಾಡುವ ಬಗ್ಗೆ ಜಾಗ್ರತೆಯಾಗಿ ಆರ್ಡರ್ಸ್ ಹೊರಡಿಸುವು ದಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ಅಜೀಜ್‌ಸೇಟ್.—ಈ ಬಗ್ಗೆ ಈಗಾಗಲೇ ಆಕ್ಷನ್ ತೆಗೆದುಕೊಂಡಿದ್ದೇವೆ. ಅದಕ್ಕೆ ಸಂಬಂಧಪಟ್ಟ ರಿಪೋರ್ಟ್ ಬಂದಿದೆ. ಇದನ್ನು ತಕ್ಷಣ ಸಂಪೂರ್ಣವಾಗಿ ವಿಮರ್ಶೆ ಮಾಡಿ ಸೂಕ್ತ ರೀತಿಯಲ್ಲಿ ಮಾಡೋಣ.

Improvements in traffic needs of residents of Bangalore City

283. Sri T. R. SHAMANNA (Fort).—

Will the Minister for Labour be pleased to state :—

(*a*) whether it has come to the notice of the Government that Bangalore Transport Service is not in a position to meet traffic needs of Bangalore City population ;

(*b*) if so, the steps that are taken to improve the traffic needs of the travelling public ?

Sri AZEEZ SAIT (Minister for Labour).—

(*a*) Yes, Government is conscious of the need for improvements.

(*b*) Adequate measures such as,

(1) improving the frequency of services ;

(2) re-routing of services ;

(3) providing extra buses during peak hours ;

(4) providing larger seats capacity buses wherever there is heavy traffic ;

(5) arranging for maintenance of queue and issue of tickets at the stand ;

(6) reduction of break down and minimising cancellation of trips ;

(7) creation of a Public Relation Cell to meet the parties who makes suggestions and to take remedial measures ;

(8) conducting refresher courses for conductors in proper behaviour with the public ;

___e been taken to improve the working of B.T.S.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರದಲ್ಲಿ ಸಾರಿಗೆ ವ್ಯವಸ್ಥೆ ಪೂರಾ ಹದಗೆಟ್ಟು ಪ್ರಯಾಣಕರಿಗೆ ಕುಳಿತುಕೊಳ್ಳುವುದಕ್ಕೆ ಸ್ಥಳ ಸಿಕ್ಕದೆ, ಅವರು ಪುಟ್‌ಬೋರ್ಡ್ ಮೇಲೆ ನಿಂತು ಅನೇಕ ಅಕ್ಸಿಡೆಂಟುಗಳಾಗುತ್ತಿರುವುದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ?

† ಶ್ರೀ ಅಜೀಜ್ ಸೇಟ್.—ಪೂರಾ ಹದಗೆಟ್ಟಿದೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ತೊಂದರೆಗಳಿವೆ ಎಂಬುದನ್ನು ನಾನೂ ಒಪ್ಪುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದೆ. ಹಾಲಿ ಹಾಕುತ್ತಿರುವ ಪಿ. ಎಚ್. ಎಸ್. ಬನ್ನುಗಳು ಸಾಲವು. ಅಲನೂರಿಗೆ ಇನ್ನೊಂದು ಹೆಚ್ಚಿಗೆ ಪಿ.ಎಚ್.ಎಸ್. ಬನ್ನನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಅಜೀಜ್ ಸೇಟ್.—ಮಾನ್ಯ ಸದಸ್ಯರು ಅವರಿಗೇನು ತೊಂದರೆ ಇದೆ ಎಂಬುದನ್ನು ಬರೆದು ಕಳುಹಿಸಿದರೆ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ತಾವೇನು ಕೆಲವು ರೂಟುಗಳಲ್ಲಿ ಅಂದರೆ ರೂಟ್ ನಂಬರ್ 31, 76, 13 (ಎ), 76 (ಬಿ) ಇವುಗಳನ್ನು ಇತ್ತೀಚೆಗೆ ಬದಲಾಸಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಇದರಿಂದ ಆ ಪ್ರದೇಶಗಳಿಂದ ಬರತಕ್ಕ ಸರ್ಕಾರಿ ನೌಕರರುಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್.—ಎಲ್ಲೆಲ್ಲಿ ಇಂಥಾ ವಿಚಾರಗಳನ್ನು ನಮ್ಮ ಗಮನಕ್ಕೆ ತರಲಾಗಿದೆಯೋ ಅಂಥಾ ಕಡೆಗಳಲ್ಲೆಲ್ಲಾ ಅದನ್ನು ಸರಿಪಡಿಸಲಾಗಿದೆ. ಆದರೆ ಈ ಸಾರಿಗೆ ಸಂಸ್ಥೆ ಹುಟ್ಟಿದ ರಾಗಾಯ್ತು ನಿಂದ ಇಲ್ಲಿಯವರೆಗೂ ಒಂದು ನರಿಯಾದ ಸರ್ವೆ ಅಂದಾಜನ್ನು ಮಾಡಲಿಲ್ಲ. ಆದರೆ ಈಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯವರು ಈ ಸರ್ವೆ. ಕಾರ್ಯವನ್ನು ಕೈಗೊಂಡು ಈ ರೂಟ್‌ಗಳನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಿಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಅವರ ಸರ್ವೆ ನಂತರ ಆ ನ್ಯೂನತೆಗಳನ್ನೆಲ್ಲಾ ಸರಿಪಡಿಸಲಾಗುವುದು.

ಶ್ರೀ ಟಿ. ಆರ್. ಶಾಮಣ್ಣ.—ನಗರದ ನಾಗರೀಕರು 4-5 ಫರ್‌ಲಾಂಗ್ ಮೇಲೆ ನಡೆಯಬೇಕಾಗಿ ಬಂದಿದೆ. ಅಲ್ಲಲ್ಲೆ ಬಸ್ ಷೆಲ್ಟರುಗಳು ಬೇರೆ ಇಲ್ಲ. ಇದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ.

ಶ್ರೀ ಅಜೀಜ್ ಸೇಟ್.—ಕೆಲವು ಕಡೆ ರೈಲಿಂಗುಗಳನ್ನು ಹಾಕರಾಗಿದೆ. ಕೆಲವು ಕಡೆ ಷೆಲ್ಟರುಗಳನ್ನು ನಿರ್ಮಿಸಲಾಗಿದೆ. ಇನ್ನು ಕೆಲವು ಸೀಟಿಂಗ್ ಅಕಾಮಡೇಷನ್ ಇದ್ದಂಥ ಬಸ್ಸುಗಳನ್ನು ಸ್ಟ್ಯಾಂಡಿಂಗಿಗೆ ಕನ್‌ವರ್ಟ್ ಮಾಡಿದೆ. ಇನ್ನೂ 59 ಡಬ್ಬಲ್ ಬಸ್ಸುಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಟಿ. ಎಂ. ಮುಂಜುನಾಥ್.—ರಾಜ್ಯದ ಬೇರೆ ಬೇರೆ ರಸ್ತೆಗಳಲ್ಲಿ ಕಾಂಟ್ರಾಕ್ಟ್ ಪರ್ಮಿಟ್‌ಗಳನ್ನು ಕೊಡುತ್ತಿರುವಂತೆ ಇಲ್ಲಿ ನಗರದಲ್ಲೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಅಜೀಜ್ ಸೇಟ್.— ಅಂಥಾ ಅವಶ್ಯಕತೆ ಇಲ್ಲಿ ಕಂಡುಬರುವುದಿಲ್ಲ. ಆದುದರಿಂದ ಇಲ್ಲಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಆರ್ ಶಾಮಣ್ಣ.—ಹನುಮಂತನಗರಕ್ಕೆ ಬಸ್ ಸೌಕರ್ಯಗಳು ಬಹಳ ಕಡಿಮೆ ಇದೆ. ಅದನ್ನು ತಪ್ಪಿಸುವುದಕ್ಕೆ ಕೂಡಲೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಅಜೀಜ್ ಸೇಟ್.—ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಅದರ ಬಗ್ಗೆ ಮಾನ್ಯ ಸದಸ್ಯರು ಇನ್ನೂ ಹೆಚ್ಚಿನ ಡೀಟೈರ್ಸ್ ಕೊಟ್ಟರೆ ಅನುಕೂಲ, ಅದನ್ನು ಪರಿಶೀಲನೆ ಮಾಡಲಾಗುತ್ತದೆ.

MADAM SPEAKER.—Now Question Hour is over. Short Notice Question No. 12 also lapses.